ಸುತ್ತಲಿದ್ದವರಿಗೂ ಸೋಪನ್ನು ತಯಾರಿಸಿ ಉಚಿತವಾಗಿ ಹಂಚಲಾರಂಭಿಸಿದೆ.

ಆ ಸಮಯದಲ್ಲಿ ನಾಝಿಗಳು ರೈತರನ್ನು ಬೆದರಿಸಿ ಅವರಿಂದ ಉಪ್ಪನ್ನು ಕಿತ್ತುಕೊಂಡು ಜರ್ಮನಿಗೆ ಕಳಿಸಿಬಿಡುತ್ತಿದ್ದರು. ಇದರಿಂದ ಜನರಿಗೆ ಉಪ್ಪು ದೊರೆಯುವುದು ಕಷ್ಟವಾಗಿತ್ತು. ನನಗೆ ಸೋಪಿಗೆ ಸಾಮಗ್ರಿಗಳನ್ನು ಒದಗಿಸಿದಾತನೇ ಒಮ್ಮೆ ಐರನ್ ಆಕ್ಸೈಡ್ ಬೆರೆತು ಬಳಕೆಗೆ ಅನರ್ಹವಾದ 100 ಕೆ.ಜಿ ಉಪ್ಪನ್ನು ಕೊಟ್ಟ. ನಾನದನ್ನು ಪರಿಷ್ಕರಿಸುವ ವಿಧಾನವನ್ನು ಕಂಡುಕೊಂಡು ರೈತರಿಗೂ ಹೇಳಿಕೊಟ್ಟು ಆ ಉಪ್ಪನ್ನು ಅವರ ಬಳಕೆಗೆ ಯೋಗ್ಯವಾಗುವಂತೆ ಮಾರ್ಪಡಿಸಿಕೊಟ್ಟೆ.

ಇದೇ ಸಮಯದಲ್ಲಿ ನನ್ನಮ್ಮ ಹಾಗೂ ನನ್ನೊಬ್ಬ ಸ್ನೇಹಿತ ಸೇನೆಯ ಕೈಯಲ್ಲಿ ಕೊಲೆಯಾದ ಘಟನೆ ನಡೆದದ್ದು. ನೋವನ್ನು ಮರೆಯಲು ನನ್ನನ್ನು ನಾನು ಇನ್ನಷ್ಟು ತೀವ್ರವಾಗಿ ಕಲಿಕೆಯಲ್ಲಿ, ಪ್ರಯೋಗಗಳಲ್ಲಿ ತೊಡಗಿಸಿಕೊಂಡೆ. ಯುದ್ಧ ವಿರೋಧಿಗಳ ಬಂಡುಕೋರರ ಜೊತೆಯಲ್ಲಿ ಕೆಲಸಮಾಡಬೇಕು. ಆಗುತ್ತಿರುವ ಅನ್ಯಾಯವನ್ನು ವಿರೋಧಿಸಬೇಕೆಂಬ ಆಸೆಯಿತ್ತು. ಅದಕ್ಕೊಂದು ಅವಕಾಶ ಒದಗಿಬಂದಿತು.

ನಾವಿದ್ದ ಊರಿನಲ್ಲಿ ಮುಖ್ಯವಾದ ರೈಲ್ವೇ ಮಾರ್ಗವೊಂದು ಹಾದುಹೋಗಿತ್ತು. ಊರಿನವರು ಸರದಿಯಂತೆ ಆ ಮಾರ್ಗವನ್ನು ವೈರಿಗಳು ಬರದಂತೆ ಕಾವಲು ಕಾಯಬೇಕಿತ್ತು. ಒಂದು ವೇಳೆ ಅಲ್ಲೇನಾದರೂ ಆಕ್ರಮಣ ನಡೆದರೆ ಊರಿನ ಜನ ಅದರಲ್ಲೂ ಯಹೂದಿಗಳು ಸಾಯುತ್ತಿದ್ದರು. ಇದು ಜರ್ಮನ್ ಸೇನೆಯ ಲೆಕ್ಕಾಚಾರವಾಗಿತ್ತು. ಬ್ರೋನ್‌ಕೋರ್ಟ್‌ನೊಂದಿಗೆ ನಮ್ಮಪ್ಪ, ಅಣ್ಣನ ಬದಲಿಗೆ ಕಾವಲಿಗೆ ಹೋಗುತ್ತಿದ್ದೆ. ಆಗಲೇ ನನಗೆ ತಿಳಿದದ್ದು ಬ್ರೋನ್‌ಕೋರ್ಟ್ ಬಂಡುಕೋರರ ಗುಂಪಿಗೆ ಸೇರಿದವನು. ಈ ಊರಿನಲ್ಲಿ ಮಾರುವೇಷದಲ್ಲಿ ಕೆಲಸ ಮಾಡುತ್ತಿದ್ದಾನೆಂದು. ಅವನು ನನ್ನನ್ನು ಈ ಗುಂಪಿಗೆ ಸಹಾಯ ಮಾಡಲು ಸಾಧ್ಯವೇ ಎಂದು ಕೇಳಿದಾಗ ಖುಷಿಯಿಂದ ಒಪ್ಪಿಕೊಂಡಿದ್ದೆ. ರೈಲ್ವೇ ಹಳಿಗಳು, ವಿದ್ಯುತ್ ತಂತಿಗಳು ಮೊದಲಾದವನ್ನು ತುಕ್ಕುಹಿಡಿಯುವಂತೆ ಮಾಡುವ ವಿಧಾನವನ್ನು ಹೇಳಿಕೊಟ್ಟ. ನಾನವನೊಂದಿಗೆ ಸೇರಿ ಈ ಕೆಲಸಗಳನ್ನು ಮೊದಲು ಮಾಡಿದೆ. ಹೀಗೆ ಬಂಡುಕೋರರೊಂದಿಗಿನ ನನ್ನ ಸಹಯಾನ ಆರಂಭವಾಯಿತು.

★★★

ಊರಿನಲ್ಲಿದ್ದ ಎಲ್ಲ ಯಹೂದಿಗಳನ್ನು ಹಿಡಿದು ಬೇರೆ ಬೇರೆ ಪ್ರದೇಶಗಳಲ್ಲಿದ್ದ ಕ್ಯಾಂಪಿಗೆ ಕಳಿಸಲು ಶುರುಮಾಡಿದರು. ನನ್ನ ಕುಟುಂಬದವರನ್ನು ಕೂಡ ಸೆರೆಹಿಡಿದು ಡ್ರಾನ್ಸಿ ಕ್ಯಾಂಪಿನಲ್ಲಿ ಬಂಧಿಸಿಟ್ಟರು. ನಾವು ಅರ್ಜೆಂಟೈನಾ ಪ್ರಜೆಗಳು ಎನ್ನುವ ಕಾರಣದಿಂದ ಮೂರು ತಿಂಗಳ ನಂತರ ಹಾಗೂ ಹೀಗೂ ಬಿಡುಗಡೆ ಮಾಡಿದರು. ಅಲ್ಲಿದ್ದ ದಿನಗಳಲ್ಲಿನ ನನ್ನ ಅನುಭವ ಮತ್ತಷ್ಟು ನನ್ನೊಳಗೆ ಈ ಕ್ರೂರ ವ್ಯವಸ್ಥೆಯ ವಿರುದ್ಧ ಹೋರಾಡುವ ಕೆಚ್ಚನ್ನು ಮೂಡಿಸಿತು. ಮನುಷ್ಯತ್ವಕ್ಕಿಂತ ಮನುಷ್ಯ ರೂಪಿಸಿಕೊಂಡ ವರ್ಣಭೇದ, ಯಾವುದೋ ಪಂಗಡ, ದೇಶಕ್ಕೆ ಸೇರಿದವನು ಎಂದು ನಿರೂಪಿಸುವ ಹಾಳೆಗಳು ಮನುಷ್ಯನನ್ನು ಕಾಡುವುದನ್ನು ಕಂಡುಕೊಂಡೆ. ದೇಶ, ಧರ್ಮಗಳ ವೈಷಮ್ಯವಿಲ್ಲದ ಜಗತ್ತು ನಿರ್ಮಾಣವಾಗಬೇಕು ಎನ್ನುವ ಹಂಬಲಕ್ಕೆ ಬಿದ್ದೆ.

ಜರ್ಮನ್ ಸೈಂಟಿಫಿಕ್ ಕಮಿಷನ್‌ನವರು ಒಬ್ಬ ವ್ಯಕ್ತಿ ನಾಝಿಯೋ ಯಹೂದಿಯೋ ಎಂದು ಕಂಡುಕೊಳ್ಳಲು ನಡೆಸುತ್ತಿದ್ದ ಪರೀಕ್ಷೆಗಳ ಬಗ್ಗೆ ತಿಳಿದದ್ದು ಇಲ್ಲಿಯೇ! ಆ ಕ್ಯಾಂಪಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ಗೆಳೆಯನೊಬ್ಬನಿಗೆ ನಾನು ಆ ಕ್ಯಾಂಪಿನಿಂದ ಹೊರಬಂದ ಮೇಲೆ ಅವನು ನಾಝಿ ಎನ್ನುವ ದಾಖಲೆಗಳನ್ನು ಸೃಷ್ಟಿಸಿದ್ದೆ. ಆದರೆ ಅದನ್ನು ಸೃಷ್ಟಿಸುವಾಗ ಆ ದಾಖಲೆಗಳು ಅವನಿಗಾಗಿ ಎಂದು ನನಗೂ ಗೊತ್ತಿರಲಿಲ್ಲ! ಎಷ್ಟೋ ವರ್ಷಗಳ ನಂತರ ನಾವಿಬ್ಬರೂ ಭೇಟಿಯಾದಾಗಲೇ